## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 207/2024

**ಸಾಕ್ಷಿಯನ್ನು ದಿಃ 29.07.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಘಟನೆ ನಡೆದಾಗ ಆರೋಪಿತರು ಹರಿದು ಹಾಕಿದ ನನ್ನ ಶರ್ಟನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಒಂದು ಶರ್ಟನ್ನು ಗುರುತಿಸಿದ್ದ, ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಹೆಚ್.ಕೆ ವಕೀಲರಿಂದಃ**

ನನ್ನ ಮತ್ತು ಅರೋಪಿಯ ಮನೆಯ ಮಧ್ಯೆ 80 ರಿಂದ 100 ಮೀಟರ್ ಅಂತರ ಇದೆ. ನಾವು ವಾಸ ಇರುವ ಜಾಗದಲ್ಲಿ ತುಂಬಾ ವಾಸದ ಮನೆಗಳು ಇವೆ. ನಾನು ಬೆಳಿಗ್ಗೆ 7 ರಿಂದ ಮಧ್ಯಾಹ್ನ 2 ರಿಂದ 3 ಗಂಟೆಯವರೆಗೆ ಕೆಲಸ ಮಾಡುತ್ತೇನೆ. ನನ್ನ ಮನೆಯಿಂದ ನಾನು ಕೆಲಸ ಮಾಡುವ ಫ್ಯಾಕ್ಟರಿಗೆ ಸುಮಾರು 2 ಕಿ.ಮೀ ದೂರ ಇದೆ. ಕೆಲಸಕ್ಕೆ ಹೋದಾಗ ಹಾಜರಾತಿ ಪುಸ್ತಕಕ್ಕೆ ಸಹಿ ಹಾಕುವ ನಿಯಮ ಇಲ್ಲ. ದಿಃ 19.01.2024 ರಂದು ಸಂಜೆ 4 ಗಂಟೆಗೆ ಘಟನೆ ನಡೆಯಿತು. ನನ್ನ ಮತ್ತು ಆರೋಪಿಯ ಮನೆಗಳ ಮಧ್ಯೆ ಎರಡೂ ಕಡೆ ಸುಮಾರು 15 ಮನೆಗಳು ಇವೆ. ನಮ್ಮ ಮನೆಯಲ್ಲಿ ನಾವೇನೂ ಮಾಡುತ್ತೇವೆ ಮತ್ತು ಆರೋಪಿಯ ಮನೆಯಲ್ಲಿ ಅವರೇನು ಮಾಡುತ್ತಾರೆ ಎಂದು ಕಾಣಿಸುವುದಿಲ್ಲ. ಆ ದಿನ ನಾನು ದೂರು ನೀಡಲು ಸ್ಕೂಟರ್ ನಲ್ಲಿ ಹೋಗುತ್ತಿದ್ದೆ. ಸಂಜೆ 4 ಗಂಟೆಗೆ ನಾನು ಮನೆಯಲ್ಲಿದ್ದೆ. ದೂರು ಕೊಡಲು ಇನ್ನೂ ಹೊರಟಿರಲಿಲ್ಲ. ನಾನು ಅಕ್ಕ-ಪಕ್ಕದ ಮನೆಯವರ ಜೊತೆ ಅನ್ಯೋನ್ಯವಾಗಿ ಇದ್ದೇನೆ. ನಾನು ಹೊರಡುವುದು ಆರೋಪಿ ತನ್ನ ಮನೆಯಲ್ಲಿ ನಿಂತರೆ ಕಾಣಿಸುವುದಿಲ್ಲ ಎಂದರೆ ಹೊರಗೆ ನಿಂತರೆ ಕಾಣಿಸುತ್ತದೆ. ನಾನು 4 ಗಂಟೆಗೆ ಮನೆಯಲ್ಲಿದ್ದಾಗ ಆರೋಪಿ ಅವರ ಮನೆಯ ಯಾವ ಭಾಗದಲ್ಲಿದ್ದರು ಎಂದು ಗೊತ್ತಿಲ್ಲ. ನಾನು ದಿಃ 22 ನೇ ತಾರೀಖು ಮಹಜರಿನ ದಿನ ಸಂಜೆ ಪೋಲಿಸರಿಗೆ ಹೇಳಿಕೆ

ಕೊಟ್ಟಿದ್ದೇನೆ. ನಾನು ಸಂಜೆ 7 ಗಂಟೆಗೆ ಠಾಣೆಯಲ್ಲಿ ಹೇಳಿಕೆ ಕೊಟ್ಟಿದ್ದೇನೆ. ಪೋಲಿಸರು 22ನೇ ತಾರೀಖು ಸಂಜೆ 5 ರಿಂದ 6 ಗಂಟೆಗೆ ಮಹಜರಿಗೆ ಬಂದಿದ್ದರು.

ಮಹಜರು ಸಮಯದಲ್ಲಿ ನಾನು ಹಾಜರಿರಲಿಲ್ಲ. ಮೊದಲು ಕುಮಾರಸ್ವಾಮಿ ಚಾಸಾ-1 ರವರನ್ನು ಹಿಡಿದು ಎಳೆದಾಡಿದರು. ಕುಮಾರಸ್ವಾಮಿ ಚಾಸಾ-1 ರವರ ನೈಟಿಯ ಕತ್ತಿನ ಪಟ್ಟಿ ಹಿಡಿದು ಎಳೆದ. ಸಾಮಾನ್ಯವಾಗಿ ಕೈಯಿಂದ ಹೊಡೆದರೆ ರಕ್ತ ಸಿಕ್ತ ಗಾಯ ಆಗುವುದಿಲ್ಲ. 2ನೇ ಆರೋಪಿ ಚಾಸಾ-1 ರವರಿಗೆ ಹಲ್ಲೆ ಮಾಡಿಲ್ಲ ಎಂದರೆ ಆತ ಕಾಲಿನಿಂದ ಚಾಸಾ-1 ರವರಿಗೆ ಒದ್ದ ಮತ್ತು ನೈಟಿಯನ್ನು ಹಿಡಿದು ಹರಿದು ಹಾಕಿದ. ಆರೋಪಿ ಚಾಸಾ-1 ರವರಿಗೆ ಕಾಲಿನಿಂದ ಒದ್ದ ಮತ್ತು ನೈಟಿಯನ್ನು ಹಿಡಿದು ಹರಿದು ಹಾಕಿದ ಎಂದು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಮತ್ತು ಪೋಲಿಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಈ ಹಿಂದೆ ಹೇಳಿದ್ದೇನೆ. ಗಲಾಟೆ ಪ್ರಾರಂಭವಾಗಿ ಮುಗಿಯುವಾಗ ಸುಮಾರು 20 ನಿಮಿಷವಾಯಿತು. ನಾನು ಹೇಳಿದಂತಹ ಘಟನೆ ನಡೆಯಬೇಕಾದರೆ 50 ನಿಮಿಷದಿಂದ ಒಂದು ಗಂಟೆ ಬೇಕು ಎಂದರೆ ಸರಿ.

ಅಕ್ಕ-ಪಕ್ಕದ ಮನೆಯವರು ಬಿಡಿಸಲು ಬಂದಿದ್ದರು. ಚಾಸಾ-3 ಮತ್ತು 4 ರವರು ಬಿಡಿಸಲು ಬಂದಿದ್ದರು. ಅವರು ನನ್ನ ಸಂಬಂಧಿಕರು ಎಂದರೆ ಸರಿ. ಘಟನೆ ನಡೆದಿದ್ದಲ್ಲಿ ಅಕ್ಕ-ಪಕ್ಕದ ಬೇರೆ ಮನೆಯವರು ಕೂಡ ಬರುತ್ತಿದ್ದರು ಎಂದರೆ ಅವರು ಯಾರು ಕೂಡ ಬೀದಿಯಲ್ಲಿರಲಿಲ್ಲ. ನಾನು ಹೇಳುವಂತಹ ಘಟನೆ ನಡೆದರೇ ಜೋರು ಧ್ವನಿಯ ಮಾತುಕತೆ ಆಗುತ್ತದೆ ಎಂದರೆ ಇಲ್ಲ. ಯಾವುದೇ ಶಬ್ದ ಬರಲಿಲ್ಲ ಎಂದರೆ ಸರಿ. ಚಾಸಾ-4 ನನ್ನ ಅಣ್ಣನ ಹೆಂಡತಿ. ಚಾಸಾ-3 ನನ್ನ ದೊಡ್ಡಪ್ಪನ ಮಗ. ನನ್ನ ಮನೆಯಿಂದ ಚಾಸಾ-3 ರವರ ಮನೆ 30 ರಿಂದ 40 ಅಡಿ ಇದೆ. ಅವರ ಮನೆಯ ಪಕ್ಕವೇ ಚಾಸಾ-4 ರವರ ಮನೆ ಇದೆ. ನಮ್ಮ ಬೀದಿಯಲ್ಲಿ ಗಂಡ, ಹೆಂಡತಿ ಮತ್ತು ಮಕ್ಕಳು ಅವರವರ ಮನೆಯಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು, ಎಲ್ಲರೂ ಕೆಲಸಕ್ಕೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸಂಜೆ 4 ಗಂಟೆ ಸ್ಕೂಲ್ ಬಿಡುವ ಸಮಯ ಎಂದರೆ ಸರಿ. ಆ ಸಮಯದಲ್ಲಿ ಮಕ್ಕಳನ್ನು ಶಾಲೆಯಿಂದ ಕರೆದುಕೊಂಡು ಬರುವ ಹೆತ್ತವರು ಬೀದಿಯಲ್ಲಿ ಓಡಾಡುತ್ತಿರುತ್ತಾರೆ ಎಂದರೆ ಆ ಸಮಯದಲ್ಲಿ ಯಾರು ಇರಲಿಲ್ಲ.

ಮು.ಮಾ–1 ರ ಶರ್ಟನ್ನು ಚಾಸಾ–1 ರವರು ಪೋಲಿಸರಿಗೆ ಕೊಟ್ಟರು. ದಿಃ 22.01.2024 ರಂದು ಸಂಜೆ 5 ರಿಂದ 6 ಗಂಟೆಗೆ ಮಹಜರಿಗೆ ಬಂದಾಗ ಚಾಸಾ–1 ರವರು ಮು.ಮಾ–1 ನ್ನು ಪೋಲಿಸರಿಗೆ ಕೊಟ್ಟಿದ್ದಾರೆ. ಕೈಯಿಂದ ಹೊಡೆದಾಗ ನನಗೆ ರಕ್ತಸಿಕ್ತ ಗಾಯ ಆಗಿರಲಿಲ್ಲ ಎಂದರೆ ತುಟಿಗೆ ಗಾಯವಾಗಿ ರಕ್ತ ಬಂತು. ಬೇರೆ ಎಲ್ಲಿಯೂ ನನಗೆ ಗಾಯಗಳು ಆಗಿಲ್ಲ ಎಂದರೆ ಸರಿ. ಮೈಕೈ ನೋವಾಗಿತ್ತು. ಗಲಾಟೆಯಲ್ಲಿ ಮು.ಮಾ–1ರ ಶರ್ಟ್ ಹರಿದು ಹೋಯಿತು. ಶರ್ಟ್ ಹರಿದು ಹೋಯಿತು ಎಂದು ನಾನು ನ್ಯಾಯಾಲಯದ ಮತ್ತು ಪೋಲಿಸರ ಮುಂದೆ ಹೇಳಿಲ್ಲ ಎಂದರೆ ಪೋಲಿಸರಿಗೆ ಹೇಳಿದ್ದೇನೆ. ನನ್ನ ಶರ್ಟ್ ನ ಮುಂಭಾಗದ ಕತ್ತಿನ ಪಟ್ಟಿ ಬಳಿ ಹರಿದು ಹೋಯಿತು. ಘಟನೆಯ ಸಮಯ ನಾನು ಅಲ್ಲಿಯೇ ಇದ್ದೆ. 1ನೇ ಆರೋಪಿ 17 ವರ್ಷದ ಚಿಕ್ಕ ಹುಡುಗ ಮತ್ತು 2ನೇ ಆರೋಪಿ ಸಣ್ಣ ವಯಸ್ಸಿನವನಾದ ಕಾರಣ ನಾನು ಇದ್ದಿದ್ದರೇ ಘಟನೆ ನಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೊದಲಿಗೆ ಕುಮಾರ ಸ್ವಾಮಿ ಚಾಸಾ–1 ರವರಿಗೆ ಹೊಡೆದ. ಮನೆಯ ಮುಂಭಾಗ ಒಳಗಡೆ ಹೊಸರಿನಲ್ಲಿ ಕುಮಾರಸ್ವಾಮಿ ಚಾಸಾ–1 ರವರಿಗೆ ಹೊಡೆದ. ಆಗ ನಾನು ತಡೆಯಲು ಹೋಗಲಿಲ್ಲ ಎಂದರೆ ನಾನು ತಡೆಯಲು ಹೋದಾಗ ಬೀರೇಶ ಬಂದ. ಕುಮಾರಸ್ವಾಮಿಯನ್ನು ನೀವು ತಡೆದು ನಿಲ್ಲಿಸಿದ್ದೀರಾ ಎಂದರೆ ನನಗೆ ತಡೆಯಲು ಆಗಲಿಲ್ಲ. ಅಷ್ಟರಲ್ಲಿ ಆರೋಪಿ ಬಂದ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನನಗೆ ಮಾತ್ರ ಹೊಡೆದಿದ್ದಾರೆ ಎಂದು ಹೇಳಿದ್ದೇನೆಯೇ ಹೊರತು ಚಾಸಾ–1 ರವರಿಗೆ ಹೊಡೆದ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ.

ನಮ್ಮ ಮನೆಯಿಂದ ಅರ್ಧ ಕಿ.ಮೀ ದೂರದಲ್ಲಿ ಆಟೋ ನಿಲ್ದಾಣ ಇದೆ ಎಂದರೆ ಸರಿಯಲ್ಲ. ಬೈಪಾಸ್ ರಸ್ತೆಯಲ್ಲಿ ಇದೆ. ನಮ್ಮ ಮನೆಯಿಂದ ಬೈಪಾಸ್ ರಸ್ತೆಯಲ್ಲಿರುವ ಆಟೋ ನಿಲ್ದಾಣ ಸುಮಾರು 100 ಮೀಟರ್ ದೂರ ಇದೆ. ನಾವು ಮನೆಯಿಂದ ಬೈಪಾಸ್ ರಸ್ತೆಗೆ ನಡೆದುಕೊಂಡು ಹೋದೆವು. ಆಟೋ ನಿಲ್ದಾಣದಲ್ಲಿ ನನಗೆ ಚಿರಪರಿಚಿತವಾಗಿರುವ ಆಟೋ ಚಾಲಕರು ಇರುತ್ತಾರೆ ಎಂದರೆ ಸರಿಯಲ್ಲ. ಬೈಪಾಸ್ ರಸ್ತೆಯಲ್ಲಿ ಆಟೋ ನಿಲ್ದಾಣ ಇಲ್ಲ ಎಂದರೆ ಸರಿ. ಆಟೋ ನಿಲ್ದಾಣ ಕಲ್ಲುಣಿಕೆ ಸರ್ಕಲ್ ನಲ್ಲಿ ಇದೆ ಎಂದರೆ ಬೈಪಾಸ್ ರಸ್ತೆಯಲ್ಲಿಯೂ ಕೂಡ ಇದೆ. ನಾವು ಸಂಜೆ ಸುಮಾರು 4–30 ಗಂಟೆಗೆ ಆಟೊ ಹತ್ತಿದೆವು. ನಮ್ಮ ಜೊತೆ ಬೇರೆ ಯಾರು ಬರಲಿಲ್ಲ. ಸಂಜೆ 4–30 ಗಂಟೆಗೆ ಶಾಲೆ ಬಿಡುವ

ಸಮಯವಾಗಿದ್ದರಿಂದ ಆ ರಸ್ತೆಯಲ್ಲಿ ಹೆಚ್ಚಿನ ಜನ ಮತ್ತು ವಾಹನ ಸಂಚಾರ ಇರುತ್ತದೆ ಎಂದರೆ ಬೈಪಾಸ್ ರಸ್ತೆಯಲ್ಲಿ ಇರುವುದಿಲ್ಲ. ನಾವು ಕೆ.ಆರ್ ನಗರ ಬೈಪಾಸ್ ರಸ್ತೆಯಿಂದ ತಾಲ್ಲೂಕು ಕಚೇರಿಯ ಮೂಲಕ ಬಂದೆವು. ಆ ರಸ್ತೆಯಲ್ಲಿ ಆ ಸಮಯದಲ್ಲಿ ಹಲವಾರು ಶಾಲೆಗಳು ಇರುವ ಕಾರಣ ತುಂಬಾ ವಾಹನಗಳು ಓಡಾಡುತ್ತವೆ ಎಂದರೆ ಸರಿ. ಅಲ್ಲಿಂದ ಆಸ್ಪತ್ರೆಗೆ ಬರಲು 15 ನಿಮಿಷ ಬೇಕಾಯಿತು. ಸುಮಾರು 4–45 ರಿಂದ 5–00 ಗಂಟೆಗೆ ಆಸ್ಪತ್ರೆ ತಲುಪಿದೆವು. ನಾನು 2 ದಿನ ಚಾಸಾ–1 3ದಿನ ಆಸ್ಪತ್ರೆಯಲ್ಲಿ ದಾಖಲಾಗಿದ್ದೆವು. ಈ ವಿಷಯವನ್ನು ಪೋಲಿಸರ ಮುಂದೆಯಾಗಲೀ ನ್ಯಾಯಾಲಯದ ಮುಂದೆಯಾಗಲೀ ಹೇಳಿಲ್ಲ ಎಂದರೆ ಪೋಲಿಸರ ಮುಂದೆ ಹೇಳಿದ್ದೇನೆ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಗೊತ್ತಿಲ್ಲ. ನಾವು ಆಸ್ಪತ್ರೆಗೆ ಹೋದ ನಂತರ ವೈದ್ಯರು ಬಂದು ನೋಡುವಾಗ ಸುಮಾರು 15 ನಿಮಿಷ ಆಗಿತ್ತು. 3 ದಿನಕ್ಕೆ ನಾನು ಆಸ್ಪತ್ರೆಯಿಂದ ಬಿಡುಗಡೆಗೊಂಡೆ. ಎಷ್ಟು ಗಂಟೆಗೆ ಬಿಡುಗಡೆಗೊಂಡೆ ಎಂದು ನೆನಪಿಲ್ಲ. ಚಾಸಾ–1 ರವರು ಆಸ್ಪತ್ರೆಯಿಂದ ಬಿಡುಗಡೆಗೊಂಡ ತಾರೀಖು ಮತ್ತು ಸಮಯ ಗೊತ್ತಿಲ್ಲ. ಈ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿದ್ದೇನೆ. ಚಿಕಿತ್ಸೆ ಪಡೆದ ಬಗ್ಗೆ ದಾಖಲೆಯನ್ನು ಪೋಲಿಸರಿಗೆ ಕೊಟ್ಟಿಲ್ಲ. ಆ ಬಗ್ಗೆ ನನ್ನನ್ನು ಪೋಲಿಸರು ಕೇಳಿದ್ದಾರೆ. ನಾನು ಹೇಳಿದಂತಹ ಘಟನೆ ನಡೆದಿಲ್ಲ ಮತ್ತು ನಾನು ಆಸ್ಪತ್ರೆಗೆ ದಾಖಲಾಗಿಲ್ಲ ಎಂದರೆ ಸರಿಯಲ್ಲ. ನನ್ನ ಶರ್ಟ್ ಮುಂಭಾಗ ಹೊರತುಪಡಿಸಿ ಬೇರೆ ಎಲ್ಲಿ ಹರಿಯಿತು ಎಂದು ಗೊತ್ತಿಲ್ಲ. ಮುಂಭಾಗ ಎರಡೂ ಬದಿಯಲ್ಲಿ ಹರಿದು ಹೋಯಿತು. ಆರೋಪಿಗೆ ತೊಂದರೆ ಕೊಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.